**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಜೇವರ್ಗಿ.**

**ಸಿ.ಸಿ.ನಂಃ 357/2022**

| | | |
|---|---|---|
| ಪಿರ್ಯಾದುದಾರಃ | 1. | ಕರ್ನಾಟಕ ಸರ್ಕಾರದ ಪರ<br>ಜೇವರ್ಗಿ ಪೋಲಿಸರು |

**ವಿರುದ್ಧ**

| | | |
|---|---|---|
| ಆರೋಪಿತರು: | 1. | ವಿಶಾಲಕುಮಾರ ತಂದೆ ಬಾಬು ಬಡಿಗೇರ,<br>ವಃ 20 ವರ್ಷ, ಉಃ ಚಾಲಕ<br>ಸಾಃ ವಿದ್ಯಾನಗರ ಜೇವರ್ಗಿ, ತಾಃ ಜೇವರ್ಗಿ,<br>ಜಿಃ ಕಲ್ಬುರ್ಗಿ |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆಗಳು**

**ಪ್ರಶ್ನೆ :1:** ಈ ಪ್ರಕರಣದಲ್ಲಿ ವಿಚಾರಣೆಯಾಗಿರುವ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿರುವಿರಾ?
ಉತ್ತರಃ

**ಪ್ರಶ್ನೆ :2: ಪ್ರಾ.ಸಾಃ 1 ಗೊಲ್ಲಾಳಪ್ಪಗೌಡ**ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 21-12-2021 ರಂದು ಭೂತಪೂರ ಕಲ್ಯಾಣ ಮಂಟಪದ ಹತ್ತಿರ ಬೆಳಿಗ್ಗೆ 11 ಗಂಟೆಗೆ ಚಂದ್ರಗೌಡರವರು ಕೆಲ್ಲೂರಿನಿಂದ ಜೇವರ್ಗಿಗೆ ಮೋಟಾರ್ ಸೈಕಲ್ ನಂ.ಕೆಎ-32 ಇಆರ್-1603ನೇದ್ದರಲ್ಲಿ ಹೋಗುತ್ತಿದ್ದಾಗ ಶಹಾಪೂರ ಕಡೆಯಿಂದ ಜೇವರ್ಗಿ ಕಡೆಗೆ ಹೋಗುತ್ತಿದ್ದಂತ ಒಂದು ಕಾರ್ ಬಂದು ಡಿಕ್ಕಿಪಡಿಸಿರುತ್ತೇನೆ ಎಂದು ಹಾಗೂ ಸದರಿ ಕಾರ್ ನಂ.ಕೆಎ-04 ಎಂ.ಕ್ಯೂ-0557ರ ಕಾರ್ ಚಾಲಕನು ಸದರಿ ಕಾರನ್ನು ಅತಿವೇಗವಾಗಿ ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಡಿಕ್ಕಿಪಡಿಸಿರುತ್ತಾನೆ ಎಂದು ಹಾಗೂ ಸದರಿ ಅಪಘಾತದ ವಿಷಯವನ್ನು ಚಾಸಾ-9 ಮತ್ತು 10 ರವರು ತಿಳಿಸಿದ ನಂತರ ಅಪಘಾತವಾದ ಸ್ಥಳಕ್ಕೆ ಬಂದು ನೋಡಿದಾಗ ಅಷ್ಟರಲ್ಲಿ ಚಂದ್ರಗೌಡರವರಿಗೆ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಹಾಗೂ ಚಂದ್ರಗೌಡರವರು ಸ್ಥಳದಲ್ಲೆ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು ಎಂದು ಹಾಗೂ ನಂತರ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದು ಹಾಗೂ ತಾನು ದೂರು ನೀಡಿದ ನಂತರ ದಿನಾಂಕ 31-12-2021 ರಂದು ಪೊಲೀಸರು ಅಪಘಾತವಾದ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ ಎಂದು

ಹಾಗೂ ಫೋಟೋಗಳಲ್ಲಿರುವ ಕಾರ್ ಮತ್ತು ಬೈಕನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ :3: ಪ್ರಾ.ಸಾಃ 2 ಸಿದ್ದಪ್ಪ**ರವರು ತಮ್ಮ ಸಾಕ್ಷ್ಯದಲ್ಲಿ, ಗೌಡ್ರು ತೀರಿಕೊಂಡಿರುವ ವಿಚಾರವಾಗಿ ಸಹಿಗಳನ್ನು ಪಡೆದಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ :4: ಪ್ರಾ.ಸಾಃ 4 ಸಾಹೇಬಗೌಡರವರು** ರವರು ತಮ್ಮ ಸಾಕ್ಷ್ಯದಲ್ಲಿ, 4-5 ವರ್ಷಗಳ ಹಿಂದೆ ಚಂದ್ರಗೌಡರಿಗೆ ಅಪಘಾತವಾಗಿದೆ ಎಂದು ಗೊತ್ತಾಗಿ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ :5: ಪ್ರಾ.ಸಾಃ 5 ಬಸವರಾಜ**ರವರು ರವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 3 ವರ್ಷಗಳ ಹಿಂದೆ ಅಪಘಾತ ಆಗಿತ್ತು ಎಂದು ಹಾಗೂ ಆ ಸಮಯದಲ್ಲಿ ನಾನು ಕೆಲ್ಲೂರು ಕಡೆಯಿಂದ ಜೇವರ್ಗಿಗೆ ಹೊರಟಿದ್ದಾಗ ಚಂದ್ರಗೌಡ ಅಪಘಾತವಾಗಿ ಸ್ಥಳದಲ್ಲಿ ಬಿದ್ದಿದ್ದರು ಅವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಹಾಗೂ ಅವರ ಜೊತೆಗೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ :6: ಪ್ರಾ.ಸಾಃ 7 ಪ್ರೇಮನಗೌಡ**ರವರು ರವರು ತಮ್ಮ ಸಾಕ್ಷ್ಯದಲ್ಲಿ, ಭೂತಪೂರ ಕಲ್ಯಾಣಮಂಟಪದ ಹತ್ತಿರ 4-5 ವರ್ಷಗಳ ಹಿಂದೆ ಚಂದ್ರಗೌಡನಿಗೆ ಅಪಘಾತ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ :7: ಪ್ರಾ.ಸಾಃ 8 ಗುರುಬಾಯಿ**ರವರು ರವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 5 ವರ್ಷಗಳ ಹಿಂದೆ ತನ್ನ ಗಂಡನಾದ ಚಂದ್ರಗೌಡನಿಗೆ ಅಪಘಾತ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ :8: ಪ್ರಾ.ಸಾಃ 9 ನಿಂಗಣ್ಣಗೌಡ**ರವರು ರವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 5 ವರ್ಷಗಳ ಹಿಂದೆ ತನ್ನ ತಂದೆಯಾದ ಚಂದ್ರಗೌಡನಿಗೆ ಅಪಘಾತ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ :9: ಪ್ರಾ.ಸಾಃ 11 ಸಿದ್ದರಾಮ**ರವರು ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 21-12-2021ರಂದು ತಾನು SHO ಕರ್ತವ್ಯದಲ್ಲಿದ್ದಾಗ ಚಾಸಾ-1ರವರು ಮಧ್ಯಾಹ್ನ 1 ಗಂಟೆಗೆ ಹಾಜರಾಗಿ ಬೆರಳಚ್ಚು ಮಾಡಿದಂತಹ ದೂರನ್ನು ನೀಡಿದ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಹಾಗೂ ಅದೇ ದಿನ ಮಧ್ಯಾಹ್ನ 2-15 ರಿಂದ 3-15 ವರೆಗೆ ಜೇವರ್ಗಿ ಸರಕಾರಿ ಆಸ್ಪತ್ರೆಯಲ್ಲಿ ಮೃತ ಚಂದ್ರಗೌಡರವರ ಶವಪಂಚನಾಮೆಯನ್ನು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಮಾಡಿರುತ್ತೇನೆ ಎಂದು ಹಾಗೂ ಚಾಸಾ-8ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಹಾಗೂ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-20 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆಃ 10** ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ?
ಉತ್ತರಃ

**ಪ್ರಶ್ನೆಃ 11** ಈ ಪ್ರಕರಣದಲ್ಲಿ ಯಾವುದಾದರೂ ನಿಮ್ಮ ಪರ ದಾಖಲಾತಿಗಳನ್ನು ಹಾಜರುಪಡಿಸುತ್ತೀರ?
ಉತ್ತರಃ

**ಪ್ರಶ್ನೆಃ 12** ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವದು ಇದೆಯಾ?
ಉತ್ತರಃ

(ಮೇಲಿನ ಆರೋಪಿತನ ಹೇಳಿಕೆಯನ್ನು ನನ್ನ ಸಮಕ್ಷಮ ನನ್ನಿಂದ ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಪ್ರಶ್ನೆಗಳನ್ನು ಓದಿ, ತಿಳಿಸಿ ಹೇಳಿದ್ದು, ಅವುಗಳನ್ನು ತಿಳಿದುಕೊಂಡು ಅವರು ಕೊಟ್ಟ ಉತ್ತರಗಳನ್ನು ಅವರಂತೆಯೇ ದಿನಾಂಕ 21-07-2026 ರಂದು ದಾಖಲಿಸಿಕೊಳ್ಳಲಾಗಿದೆ)

ಜೇವರ್ಗಿ
21-07-2026

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ